---

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

4ನೇ ಮಾರ್ಚ್ 2022

ಶುಕ್ರವಾರ

## ವಿಷಯಾನುಕ್ರಮಣಿಕೆ (Index)

1. ವಿತ್ತೀಯ ಕಾರ್ಯಕಲಾಪ

"2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ"

-ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)
(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ)

2. ಬಜೆಟ್ ಮಂಡನೆಯ ದಿನ ಜಂಟಿ ಅಧಿವೇಶನವನ್ನು ಕರೆಯುವ ಬಗ್ಗೆ

- ಶ್ರೀ ಅಡಗೂರ್ ಹೆಚ್. ವಿಶ್ವನಾಥ್

3. ಸದನದಲ್ಲಿ ಆಸನಗಳ ಮಧ್ಯೆ ಅಳವಡಿಸಿರುವ ಗ್ಲಾಸ್‌ನ್ನು ತೆಗೆಸುವ ಬಗ್ಗೆ

- ಶ್ರೀ ಪುಟ್ಟಣ್ಣ

~ ~ ~ ~ ~

(104)04.3.2022/12.30/ಎಂ.ಎಂ–ಎ.ಕೆ

## ಕರ್ನಾಟಕ ವಿಧಾನ ಪರಿಷತ್ತು

ಶುಕ್ರವಾರ, 4ನೇ ಮಾರ್ಚ್ 2022

ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಮಧ್ಯಾಹ್ನ 12 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

**1. <u>ವಿತ್ತೀಯ ಕಾರ್ಯಕಲಾಪ</u>**

**"2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮಂಡನೆ"**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನ ಆಯವ್ಯಯವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(ಆಯವ್ಯಯದ ಕನ್ನಡ ಹಾಗೂ ಆಂಗ್ಲ ಪ್ರತಿಯನ್ನು**

**ಲಗತ್ತಿಸಲಾಗಿದೆ)**

---

**2. ಬಜೆಟ್ ಮಂಡನೆಯ ದಿನ ಜಂಟಿ ಅಧಿವೇಶನವನ್ನು ಕರೆಯುವ ಬಗ್ಗೆ**

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬರೀ ಬಜೆಟ್ ಪುಸ್ತಕವನ್ನು ಮಂಡಿಸುವ ಬದಲು ದಯಮಾಡಿ ಮುಂದಿನ ವರ್ಷದಿಂದಲಾದರೂ ಕೂಡ ಜಂಟಿ ಅಧಿವೇಶನವನ್ನು ಮಾಡಿಸಿ, ನಾವು ಕೂಡ ಮಾನ್ಯ ಮುಖ್ಯಮಂತ್ರಿಯವರು ಏನು ಹೇಳುತ್ತಾರೆ ಎಂಬುದನ್ನು ಕೇಳುವಂತಹ ಒಂದು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಏಕೆಂದರೆ ಮಂಡನೆ ಮಾಡಿಬಿಟ್ಟರೆ ಏನೂ ಆಗುವುದಿಲ್ಲ. ಹಿಂದೆಯೂ ಕೂಡ ಕೆಲವು ಸದಸ್ಯರು ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಿದ್ದಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ತುಂಬಾ ಒಳ್ಳೆಯ ಸಲಹೆಯಾಗಿದೆ.

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ನಾನು ನಮ್ಮ ಎಲ್ಲಾ ಸ್ನೇಹಿತರ ಪರವಾಗಿ ಈ ವಿಚಾರದಲ್ಲಿ ತಮ್ಮನ್ನು ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಹೆಚ್.ವಿಶ್ವನಾಥ್‌ರವರು ಹೇಳಿದ ವಿಚಾರ ನನ್ನ ಮನಸ್ಸಿನಲ್ಲಿ ಬಹಳ ಸಲ ಬಂದಿತ್ತು ಮತ್ತು ಬಹಳಷ್ಟು ಸದಸ್ಯರು ಕೂಡ ಈ ವಿಚಾರವಾಗಿ ಈಗಾಗಲೇ ಪ್ರಸ್ತಾಪಿಸಿದ್ದಾರೆ. ಆದುದರಿಂದ ಈ ವಿಚಾರದಲ್ಲಿನ ತಾಂತ್ರಿಕ ತೊಂದರೆ ಏನು ಮತ್ತು ಸಂವಿಧಾನದಲ್ಲಿ ಏನು ಹೇಳಲಾಗಿದೆ ಎಂಬುದನ್ನು ಸಹ ನಾವು ವಿಚಾರ ಮಾಡಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ನಾವೆಲ್ಲರೂ ಜಂಟಿ ಅಧಿವೇಶನದಲ್ಲಿ ಭಾಗವಹಿಸುವ ರೀತಿ ಬಜೆಟ್ ಅಧಿವೇಶನದಲ್ಲಿಯೂ ಸಹ ಭಾಗವಹಿಸುವ ಬಗ್ಗೆ ತಾವೇನು ಸಲಹೆ ನೀಡಿದ್ದೀರಿ, ಅದರ ಬಗ್ಗೆ ಎಲ್ಲರೂ ಸೇರಿ ಸಂಬಂಧಪಟ್ಟವರ ಜೊತೆ ಚರ್ಚೆ ಮಾಡಿ ಮುಂದಿನ ಸಲ ಈ ರೀತಿ ಮಾಡುವುದಕ್ಕೆ ಅವಕಾಶವಿದ್ದರೆ, ಮುಂದಿನ ಕ್ರಮ ತೆಗೆದುಕೊಳ್ಳೋಣ.

**3. ಸದನದಲ್ಲಿ ಆಸನಗಳ ಮಧ್ಯೆ ಅಳವಡಿಸಿರುವ ಗ್ಲಾಸ್‌ನ್ನು ತೆಗೆಸುವ ಬಗ್ಗೆ**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಸನಗಳ ಮಧ್ಯೆ ಅಳವಡಿಸಿರುವ ಗ್ಲಾಸ್ ಅನ್ನು ತೆಗೆಸಿದರೆ ಒಳ್ಳೆಯದು ಎಂದು ಹೇಳಬಯಸುತ್ತೇನೆ. ಈಗ ಎಲ್ಲಾ ಆಗಿರುವುದರಿಂದ ಈ ಗ್ಲಾಸ್‌ಗಳನ್ನು ತೆಗೆಸಿದರೆ ಒಳ್ಳೆಯದು.

**ಸಭಾಪತಿಯವರು:–** ಇನ್ನೆರಡು ದಿವಸಗಳಲ್ಲಿ ಯಾವುದೇ ಪರಿಸ್ಥಿತಿ ಇರಲಿ ಅದನ್ನು ತೆಗೆಸುತ್ತೇನೆ. ಮೊನ್ನೆ ದಿವಸವೇ ಹೇಳಿದ್ದೆ, ಅದನ್ನು ತೆಗೆಯುವ ಟೆಕ್ನಿಕಲ್ ಸಿಬ್ಬಂದಿ ಸಿಕ್ಕಿಲ್ಲ. ಎರಡು ದಿವಸದಲ್ಲಿ ತೆಗೆಸುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು.

ಈಗ ಸದನವನ್ನು ದಿನಾಂಕ 07.03.2022ರ ಸೋಮವಾರ ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಮಧ್ಯಾಹ್ನ 12 ಗಂಟೆ 39 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ದಿನಾಂಕ 07ನೇ ಮಾರ್ಚ್ ಮಾಹೆ 2022ರ ಸೋಮವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)**

**<><><>**